**ಕರ್ನಾಟಕ ಸರ್ಕಾರ**

ಸಂಖ್ಯೆ: ಇಡಿ 257 ಡಿಸಿಇ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 26.08.2021

**ಅಧಿಸೂಚನೆ**

ಸರ್ಕಾರದ ಅಧಿಸೂಚನೆ ಸಂಖ್ಯೆ : ಇಡಿ 257 ಡಿಸಿಇ 2019 (ಭಾಗ-3), ದಿನಾಂಕ: 08.07.2020 ಮತ್ತು ತಿದ್ದುಪಡಿ ಅಧಿಸೂಚನೆ ದಿನಾಂಕ: 19.10.2020ರಲ್ಲಿ ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆ) (ಸಹಾಯಕ ಪ್ರಾಧ್ಯಾಪಕರ ನೇಮಕಾತಿ) (ವಿಶೇಷ) ನಿಯಮಗಳು 2020ರನ್ವಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ, 2015ನೇ ಸಾಲಿನ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದೆ ಭರ್ತಿಯಾಗದಿರುವ 145 ಹುದ್ದೆಗಳನ್ನೊಳಗೊಂಡಂತೆ ಪ್ರಸ್ತುತ ಭರ್ತಿ ಮಾಡಬೇಕಾಗಿರುವ 1097 ಹುದ್ದೆಗಳು ಸೇರಿ ಒಟ್ಟು **1242** ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಅದರಂತೆ, 1242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ವಿಶೇಷ ನೇಮಕಾತಿ ನಿಯಮಗಳನ್ವಯ ಭರ್ತಿ ಮಾಡುವ ಸಲುವಾಗಿ ಆಯ್ಕೆ ಪ್ರಕ್ರಿಯೆಯನ್ನು ನಡೆಸಲು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 257 ಡಿಸಿಇ 2019 (ಭಾಗ-3), ದಿನಾಂಕ: 15.07.2021ರಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವನ್ನು ಆಯ್ಕೆ ಪ್ರಾಧಿಕಾರವನ್ನಾಗಿ ಆಯ್ಕೆ ಮಾಡಿ ಅಧಿಸೂಚಿಸಲಾಗಿದೆ.

ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಯುಜಿಸಿ ವೇತನ ಶ್ರೇಣಿ ರೂ.57700-182400ಯಲ್ಲಿ ನೇರ ನೇಮಕಾತಿ ಮೂಲಕ ಆಯ್ಕೆ ಮಾಡಿಕೊಳ್ಳಲು ಈ ಕೆಳಕಂಡಂತೆ ವಿಷಯವಾರು ಮತ್ತು ವೃಂದವಾರು ವಿವರ ಈ ಕೆಳಕಂಡಂತೆ ಇದೆ:

**2015ರ ನೇಮಕಾತಿಯಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದೆ ಭರ್ತಿಯಾಗದಿರುವ ಒಟ್ಟು 145 ಹುದ್ದೆಗಳ ವಿವರ (Carry forward)**

| ಕ್ರ. ಸಂ | ವಿಷಯ | ಕಲ್ಯಾಣ ಕರ್ನಾಟಕ ಪ್ರದೇಶ ಹೊರತುಪಡಿಸಿದ ಮಿಕ್ಕುಳಿದ ವೃಂದದಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದೆ ಭರ್ತಿ ಮಾಡಿಲ್ಲದಿರುವ (Carry forward) ಹುದ್ದೆಗಳ ಸಂಖ್ಯೆ | | | ಕಲ್ಯಾಣ ಕರ್ನಾಟಕ ಪ್ರದೇಶ ಸ್ಥಳೀಯ ವೃಂದದಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದೆ ಭರ್ತಿ ಮಾಡಿಲ್ಲದಿರುವ (Carry forward) ಹುದ್ದೆಗಳ ಸಂಖ್ಯೆ | | | ಒಟ್ಟಾರೆ ಹುದ್ದೆಗಳ ಸಂಖ್ಯೆ (5 +8) |
|---|---|---|---|---|---|---|---|---|
| | | ಮಿಕ್ಕುಳಿದ ವೃಂದ | ಗ್ರೂಪ್-ಸಿ | ಒಟ್ಟು (3+4) | ಕೆ.ಕೆ.ವೃಂದ | ಗ್ರೂಪ್-ಸಿ | ಒಟ್ಟು (6+7) | |
| **1** | **2** | **3** | **4** | **5** | **6** | **7** | **8** | **9** |
| 1 | ಕನ್ನಡ | 1 | 0 | 1 | 1 | 0 | 1 | 2 |
| 2 | ಇಂಗ್ಲೀಷ್ | 30 | 1 | 31 | 18 | 1 | 19 | 50 |
| 3 | ಹಿಂದಿ | 0 | 0 | 0 | 1 | 0 | 1 | 1 |
| 4 | ಉರ್ದು | 3 | 0 | 3 | 3 | 0 | 3 | 6 |
| 5 | ಇತಿಹಾಸ | 1 | 0 | 1 | 0 | 0 | 0 | 1 |
| 6 | ಅರ್ಥಶಾಸ್ತ್ರ | 0 | 1 | 1 | 0 | 0 | 0 | 1 |



Scanned by CamScanner

| | | | | | | | | |
|---|---|---|---|---|---|---|---|---|
| 7 | ರಾಜ್ಯಶಾಸ್ತ್ರ | 2 | 0 | 2 | 0 | 0 | 0 | 2 |
| 8 | ಸಮಾಜಶಾಸ್ತ್ರ | 1 | 0 | 1 | 0 | 0 | 0 | 1 |
| 9 | ಸಮಾಜಕಾರ್ಯ | 1 | 0 | 1 | 0 | 0 | 0 | 1 |
| 10 | ವಾಣಿಜ್ಯಶಾಸ್ತ್ರ | 9 | 1 | 10 | 17 | 0 | 17 | 27 |
| 11 | ನಿರ್ವಹಣಾಶಾಸ್ತ್ರ | 9 | 0 | 9 | 5 | 0 | 5 | 14 |
| 12 | ಭೌತಶಾಸ್ತ್ರ | 2 | 0 | 2 | 0 | 0 | 0 | 2 |
| 13 | ರಸಾಯನಶಾಸ್ತ್ರ | 2 | 0 | 2 | 1 | 0 | 1 | 3 |
| 14 | ಗಣಿತಶಾಸ್ತ್ರ | 3 | 0 | 3 | 0 | 0 | 0 | 3 |
| 15 | ಗಣಕವಿಜ್ಞಾನ | 12 | 0 | 12 | 16 | 0 | 16 | 28 |
| 16 | ಫ್ಯಾಷನ್ ಟೆಕ್ನಾಲಜಿ | 3 | 0 | 3 | 0 | 0 | 0 | 3 |
| ಒಟ್ಟು | | **79** | **3** | **82** | **62** | **1** | **63** | **145** |

**ಪ್ರಸ್ತುತ ನೇಮಕಾತಿಯಲ್ಲಿ ಭರ್ತಿ ಮಾಡಬೇಕಾಗಿರುವ 1097 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ವಿವರ (ಮಿಕ್ಕುಳಿದ ವೃಂದ-939 ಮತ್ತು ಕಲ್ಯಾಣ ಕರ್ನಾಟಕ ವೃಂದ -158)**

| ಕ್ರ. ಸಂ | ವಿಷಯ | ಕಲ್ಯಾಣ ಕರ್ನಾಟಕ ಪ್ರದೇಶ ಹೊರತುಪಡಿಸಿದ ಮಿಕ್ಕುಳಿದ ವೃಂದದಲ್ಲಿ ಭರ್ತಿ ಮಾಡಬೇಕಾಗಿರುವ ಖಾಲಿ ಹುದ್ದೆಗಳ ಸಂಖ್ಯೆ | | | ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದಲ್ಲಿ ಭರ್ತಿ ಮಾಡಬೇಕಾಗಿರುವ ಖಾಲಿ ಹುದ್ದೆಗಳ ಸಂಖ್ಯೆ | | | ಒಟ್ಟಾರೆ ಖಾಲಿ ಹುದ್ದೆಗಳ ಸಂಖ್ಯೆ |
|---|---|---|---|---|---|---|---|---|
| | | ಮಿಕ್ಕುಳಿದ ವೃಂದ | ಗ್ರೂಪ್-ಸಿ | ಒಟ್ಟು (3+4) | ಕೆ.ಕೆ.ವೃಂದ | ಗ್ರೂಪ್-ಸಿ | ಒಟ್ಟು (6+7) | (5 +8) |
| **1** | **2** | **3** | **4** | **5** | **6** | **7** | **8** | **9** |
| 1 | ಕನ್ನಡ | 85 | 4 | 89 | 15 | 1 | 16 | 105 |
| 2 | ಇಂಗ್ಲೀಷ್ | 31 | 2 | 33 | 1 | 0 | 1 | 34 |
| 3 | ಹಿಂದಿ | 7 | 0 | 7 | 2 | 0 | 2 | 9 |
| 4 | ಉರ್ದು | 3 | 0 | 3 | 0 | 0 | 0 | 3 |
| 5 | ಇತಿಹಾಸ | 89 | 5 | 94 | 13 | 1 | 14 | 108 |
| 6 | ಅರ್ಥಶಾಸ್ತ್ರ | 102 | 5 | 107 | 13 | 1 | 14 | 121 |
| 7 | ರಾಜ್ಯಶಾಸ್ತ್ರ | 79 | 4 | 83 | 12 | 1 | 13 | 96 |
| 8 | ಸಮಾಜಶಾಸ್ತ್ರ | 36 | 2 | 38 | 9 | 1 | 10 | 48 |
| 9 | ಶಿಕ್ಷಣ ಶಾಸ್ತ್ರ | 2 | 0 | 2 | 0 | 0 | 0 | 2 |
| 10 | ಕಾನೂನು | 15 | 1 | 16 | 1 | 0 | 1 | 17 |
| 11 | ಸಮಾಜಕಾರ್ಯ | 4 | 0 | 4 | 0 | 0 | 0 | 4 |
| 12 | ಭೂಗೋಳಶಾಸ್ತ್ರ | 8 | 0 | 8 | 0 | 0 | 0 | 8 |
| 13 | ಭೂಗರ್ಭಶಾಸ್ತ್ರ | 5 | 0 | 5 | 0 | 0 | 0 | 5 |
| 14 | ವಾಣಿಜ್ಯಶಾಸ್ತ್ರ | 134 | 7 | 141 | 28 | 2 | 30 | 171 |
| 15 | ನಿರ್ವಹಣಾಶಾಸ್ತ್ರ | 0 | 0 | 0 | 1 | 0 | 1 | 1 |
| 16 | ಭೌತಶಾಸ್ತ್ರ | 56 | 3 | 59 | 14 | 1 | 15 | 74 |
| 17 | ರಸಾಯನಶಾಸ್ತ್ರ | 66 | 3 | 69 | 12 | 1 | 13 | 82 |
| 18 | ಜೈವಿಕ ರಸಾಯನಶಾಸ್ತ್ರ | 5 | 0 | 5 | 0 | 0 | 0 | 5 |
| 19 | ಗಣಿತಶಾಸ್ತ್ರ | 49 | 3 | 52 | 19 | 1 | 20 | 72 |
| 20 | ಸೂಕ್ಷ್ಮಜೀವಶಾಸ್ತ್ರ | 5 | 0 | 5 | 0 | 0 | 0 | 5 |
| 21 | ಪ್ರಾಣಿಶಾಸ್ತ್ರ | 26 | 1 | 27 | 4 | 0 | 4 | 31 |
| 22 | ಸಸ್ಯಶಾಸ್ತ್ರ | 45 | 2 | 47 | 4 | 0 | 4 | 51 |
| 23 | ಎಲೆಕ್ಟ್ರಾನಿಕ್ಸ್ | 4 | 0 | 4 | 0 | 0 | 0 | 4 |
| 24 | ಗಣಕವಿಜ್ಞಾನ | 33 | 2 | 35 | 0 | 0 | 0 | 35 |
| 25 | ಸಂಖ್ಯಾಶಾಸ್ತ್ರ | 6 | 0 | 6 | 0 | 0 | 0 | 6 |
| ಒಟ್ಟು | | **895** | **44** | **939** | **148** | **10** | **158** | **1097** |



Scanned by CamScanner

ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 91 ಡಿಸಿಇ 2004, ದಿನಾಂಕ: 25.09.2009ರನ್ವಯ ಕಾಲೇಜು ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಮೇಲಿನ ಕೋಷ್ಟಕಗಳಲ್ಲಿ ವಿವರಿಸಿರುವಂತೆ ಭರ್ತಿ ಮಾಡಲು ಉದ್ದೇಶಿಸಿರುವ ವಿಷಯವಾರು ಒಟ್ಟು 1242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಲ್ಲಿ ಶೇಕಡ 95 ರಷ್ಟು ನೇರ ನೇಮಕಾತಿ ಮೂಲಕ ಹಾಗೂ ಶೇಕಡ 5 ರಷ್ಟು ಇಲಾಖೆಯ ಗ್ರೂಪ್-ಸಿ ವೃಂದದಿಂದ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಗ್ರೂಪ್-ಸಿ ವೃಂದದಲ್ಲಿ ಮೀಸಲಿರಿಸಲಾದ ಎಲ್ಲಾ ಹುದ್ದೆಗಳನ್ನು ಗ್ರೂಪ್-ಸಿ ವೃಂದದಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಮೀಸಲಿರಿಸಲಾದ ನೇರ/ಸಮತಳ ಬಿಂದುಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಾಗದೇ ಇದ್ದಲ್ಲಿ, ಗ್ರೂಪ್-ಸಿ ವೃಂದದಲ್ಲಿಯೇ ಇತರೆ ಸಾಮಾನ್ಯ ವರ್ಗದ ಅರ್ಹ ಅಭ್ಯರ್ಥಿಗಳಿಂದ ಆಯ್ಕೆ ಮಾಡಲು ಹಾಗೂ ಒಂದು ವೇಳೆ ಸದರಿ ಮೀಸಲಾತಿಗಳಿಗೂ ಸಹ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದೆ ಇದ್ದಲ್ಲಿ, ಶೇಕಡ 95ರ ಸಾಮಾನ್ಯ ವರ್ಗದ ಅರ್ಹ ಅಭ್ಯರ್ಥಿಗಳಿಂದ ಆಯ್ಕೆ ಮಾಡಬಹುದಾಗಿದೆ. ಅದರಂತೆ, ವಿಷಯವಾರು ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ಹೊರತುಪಡಿಸಿದ, ಮಿಕ್ಕುಳಿದ ವೃಂದ ಹಾಗೂ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ ಪ್ರತ್ಯೇಕವಾಗಿ ಹಂಚಿಕೆ ಮಾಡಲಾಗಿದೆ ಹಾಗೂ ಸದರಿ ವಿಷಯಗಳಲ್ಲಿ ಹಂಚಿಕೆ ಮಾಡಲಾಗಿರುವ ಹುದ್ದೆಗಳನ್ನು ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಮೀಸಲಾತಿ ನಿಯಮಗಳನ್ವಯ (ನೇರ ಹಾಗೂ ಸಮತಳ ಮೀಸಲಾತಿ) ಕಲ್ಯಾಣ ಕರ್ನಾಟಕ ಹೊರತುಪಡಿಸಿದ ಮಿಕ್ಕುಳಿದ ವೃಂದ ಹಾಗೂ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ ಪ್ರತ್ಯೇಕವಾಗಿ ವರ್ಗೀಕರಿಸಿ, ಅವುಗಳ ವಿಷಯವಾರು ಹುದ್ದೆಗಳ ಹಂಚಿಕೆಯ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಸದರಿ ಸಹಾಯಕ ಪ್ರಾಧ್ಯಾಪಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಆಯ್ಕೆ ಪ್ರಾಧಿಕಾರವಾದ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸ್ಪರ್ಧಾತ್ಮಕ ಪರೀಕ್ಷೆ ನಡೆಸಲು ಅಗತ್ಯವಿರುವ ಪಠ್ಯಕ್ರಮವನ್ನು ಇಲಾಖೆಯಲ್ಲಿ ರಚಿಸಲ್ಪಟ್ಟ ವಿವಿಧ ವಿಷಯಗಳ ತಜ್ಞರ ಸಮಿತಿಯಿಂದ ಸಿದ್ಧಪಡಿಸಲಾಗಿದೆ.

ಮುಂದುವರೆದು, ಸಹಾಯಕ ಪ್ರಾಧ್ಯಾಪಕರ ವಿಶೇಷ ನೇಮಕಾತಿ ನಿಯಮಗಳು ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 3 ಹೈಕಕೋ 2018, ದಿನಾಂಕ:06.06.2020ರನ್ವಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ 1242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನಿಯಮಾನುಸಾರ ಸರ್ಧಾತ್ಮಕ ಪರೀಕ್ಷೆಯನ್ನು ನಡೆಸಿ, ಮೆರಿಟ್ ಆಧಾರದ ಮೇಲೆ ಅಭ್ಯರ್ಥಿಗಳನ್ನು ಮೀಸಲಾತಿ (ನೇರ ಮತ್ತು ಸಮತಳ) ಮತ್ತು ರೋಸ್ಟರ್ ಬಿಂದುಗಳನ್ವಯ ಆಯ್ಕೆ ಮಾಡಿ, ಅಂತಿಮ ಆಯ್ಕೆ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಎಸ್. ಹರ್ಷ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ)

ಇವರಿಗೆ,

1. ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು (ಇ-ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿದೆ).
2. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.

ಪ್ರತಿ

1) ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
2) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.



Scanned by CamScanner